## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 3701/2023 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಮೆಹಬೂಬ |
| ತಂದೆಃ ಗಂಡ | ಃ | ಚಾಂದಸಾಬ ಜಮಾದಾರ |
| ವಯಸ್ಸು | ಃ | ೪೫ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಮಾಡಿಯಾಳ |

ದಿನಾಂಕಃ೩೦.೧೨.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-2 ರಿಂದ 6 ರವರ ಪರಿಚಯ ಇರುತ್ತದೆ.

ರಾತ್ರಿ10.00 ಗಂಟೆ ಸುಮಾರಿಗೆ ನಾನು ಹನುಮಾನ ದೇವರ ಗುಡಿಯ ಹತ್ತಿರ ಹೋಗುತ್ತಿರುವಾಗ ಆರೋಪಿ ಬಂದು ನನ್ನ ಕಪಾಳಕ್ಕೆ ಹೊಡೆದನು, ನಾನು ಕೆಳಗೆ ಬಿದ್ದೆನು, ಆಗ ಕಲ್ಲು ತೆಗೆದುಕೊಂಡು ನನ್ನ ತಲೆಯ ಮೇಲೆ ಹೊಡೆದಿರುತ್ತಾನೆ. ಆಗ ನಾನು ಮೂರ್ಛೆ ಹೋಗಿರುತ್ತೇನೆ. ಅಲ್ಲೇ ಇರುವ ಚಾಸಾ-೪ ಮತ್ತು ೫ ರವರು ನನ್ನನ್ನು ಅಂಬುಲೆನ್ಸ ಮೂಲಕ ಕಲಬುರಿಗೆ ಆಸ್ಪತ್ರೆಗೆ ಕಳಿಸಿರುತ್ತಾರೆ. ಕಲಬುರಗಿ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಬಂದ ನಂತರ ನಾನು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಫಿರ್ಯಾದಿಯಲ್ಲಿನ ತನ್ನ ಸಹಿಯನ್ನು ಗುರುತನ್ನು ನೋಡಿ ಗುರುತಿಸಿದ್ದರಿಂದ ಫಿರ್ಯಾದಿಯನ್ನು ನಿಪಿ-೧ ಎಂದು ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಕಲ್ಲನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ-೧ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ನೀಡಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಆರೋಪಿಯ ವಿರುದ್ದ ನಿಂಬರ್ಗಾ ಪೋಲಿಸ್ ಠಾಣೆ ಗುನ್ನಾ ನಂ. **121/2021** ರಲ್ಲಿ ನನ್ನ ಸಹೋದರ ಫಿರ್ಯಾದಿದಾರನಿರುತ್ತಾನೆ ಎಂದರೆ ಸರಿ. ಸದರಿ ಪ್ರಕರಣದಿಂದ ನಮ್ಮ ಮತ್ತು ಮೆಹಬೂಬ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸರಿ. ದಿ.**27.04.2023** ರಂದು ಆರೋಪಿ ರಾತ್ರಿ **10.00** ಗಂಟೆ ಸುಮಾರಿಗೆ ಬಂದು ರಾಂಡಕೇ ಪಿಚಲಿ ಬಾರ ತೆರ ಭಾಯಿ ಕರೀಂಕೆ ಊಪರ ಕೇಸ್ ಕರಕೇ ಜೈಲಕೋ ಭೇಜೆ ತುಮಕೊ ಬಹುತ ಮಸ್ತಿ ಆಯಾ ಎಂದು ಅವಾಚ್ಯ ಶಬ್ದಗಳಿಂದ ಬಯ್ಯಲು ಆರಂಭಿಸಿದನು ಎಂದರೆ ಸರಿ. ಆಗ ನಾನು ನನ್ನ ಅಣ್ಣನನ್ನು ಕರೀಂ ಹೊಡೆ ಬಡೆ ಮಾಡಿದ್ದರಿಂದ ಅವನು ಪ್ರಕರಣವನ್ನು ದಾಖಲಿಸಿರುತ್ತಾನೆ ಎಂದು ಕೇಳಿದೆನು ಎಂದರೆ ಸರಿ. ಮೆಹಬೂಬ ನನ್ನನ್ನು ತಡೆಹಿಡಿದು ನಿಲ್ಲಿಸಿದನು ಎಂದರೆ ಸರಿ. ಚಾಸಾ-೪ ಮತ್ತು ೫ ರವರು ನಾನು ಚೀರಾಡುವ ಶಬ್ದವನ್ನು ಕೇಳಿ ಬಂದು ಜಗಳ

ಬಿಡಿಸಿರುತ್ತಾರೆ ಎಂದರೆ ಸರಿ. ಈಗ ಚಾಸಾ-೪ ಮತ್ತು ೫ ರವರು ಜಗಳ ಬಿಡಿಸಿರುತ್ತಾರೆ, ಇನ್ನೊಮ್ಮೆ ನನ್ನ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂಧರೆ ಸರಿ. ಸದರಿ ಘಟನೆ ಕುರಿತು ಚಾಸಾ-೪ ಮತ್ತು ೫ ರವರು ನನ್ನ ಸಹೋದರನಿಗೆ ತಿಳಿಸಿರುತ್ತಾರೆ ಎಂಧರೆ ಸರಿ. ಆಗ ರಾತ್ರಿ **10.30** ಗಂಟೆಗೆ ನನ್ನ ಸಹೋದರ ಘಟನಾ ಸ್ಥಳಕ್ಕೆ ಬಂದನು ಎಂದರೆ ಸರಿ. ನನ್ನನ್ನು ಅದೇ ರಾತ್ರಿ ನಿಂಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ನೇರವಾಗಿ ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ತೋರಿಸಿಕೊಂಡ ನಂತರ ನಾನು, ನನ್ನ ಸಹೋದರ ನಿಂಬರ್ಗಾ ಪೋಲಿಸ್ ಠಾಣೇಗೆ ಹೋಗಿ ತಡವಾಗಿ ಫಿರ್ಯಾದಿ ಸಲ್ಲಿಸಿರುತ್ತೇವೆ ಎಂದರೆ ಸರಿ. ದಿ.**04.05.2023** ರಂದು **4** ರಿಂದ **5** ಗಂಟೆವರೆಗೆ ಪೋಲಿಸರು ನಾನು ತೋರಿಸಿದ ಜಾಗದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ ಎಂಧರೆ ಸರಿ. ಪೋಲಿಸರು ಸ್ಥಳದಲ್ಲಿ ಭಾವಚಿತ್ರ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಭಾವಚಿತ್ರದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-೨ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಎಸ್.ಎನ್. ವಕೀಲರಿಂದ**

ಆರೋಪಿ ಮತ್ತು ಕರೀಂಸಾಬ ಅವರ ನಡುವೆ ಯಾವುದೇ ರೀತಿಯಾದ ಸಂಬಂಧವಿಲ್ಲ ಎಂಧರೆ ಸರಿ ಅಲ್ಲ. ನನ್ನ ಸಹೋದರ ಕರೀಂಸಾಬರ ಮೇಲೆ ಪ್ರಕರಣ ದಾಖಲಿಸಿದಾಗ ಈ ಪ್ರಕರಣದ ಆರೋಪಿಯ ಮೇಲೆ ಯಾವುದೇ ಫಿರ್ಯಾದಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಆರೋಪಿ, ನನ್ನ ಸಹೊದರ ಮತ್ತು ನನ್ನ ನಡುವೆ ಯಾವುದೇ ವೈಮನಸ್ಸಿಲ್ಲ ಎಂದರೆ ಸರಿ, ಮೊದಲು ಇರಲಿಲ್ಲ ಈ ಘಟನೆ ಆದ ನಂತರ ವೈಮನಸ್ಸಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಸಹೋದರ ಕರೀಂಸಾಬರವರ ದಾಖಲಿಸಿದ ಪ್ರಕರಣದಲ್ಲಿ ನಾನು ಸಾಕ್ಷಿದಾರನೆಂದು ಇರುವುದಿಲ್ಲ ಎಂದರೆ ಸರಿ.

ನಮ್ಮ ಮನೆಯಿಂದ ಹನುಮಾನ ದೇವರ ಗುಡಿ 100 ಫೀಟ್ ಅಂತರವಿದೆ. ಮೆಹಬೂಬಸಾಬ, ಕರೀಂಸಾಬ ರವರ ಮನೆಯಿಂದಲೂ ಹನುಮಾನ ದೇವರ ಗುಡಿ 100 ಫೀಟ್ ಅಂತರವಿದೆ. ನಾನು ಹನುಮಾನ ದೇವರ ದೇವಸ್ಥಾನದ ಮುಂದೆ ಒಬ್ಬನೇ ಹೊರಟಿದ್ದೆನು. ನಾನು ಹನುಮಾನ ದೇವರ ದೇವಸ್ಥಾನದ ಮುಂದೆ ಮನೆ ಕಡೆಗೆ ಹೊರಟಿದ್ದೆನು. ಘಟನೆ ಸುಮಾರು 15 ನಿಮಿಷದವರೆಗೆ ನಡೆದಿರುತ್ತದೆ. ಘಟನೆ ನಡೆದಾಗ ಎಷ್ಟು ಜನರು ಕೂಡಿದ್ದರು ಎಂದರೆ ಸಾಕ್ಷಿಯು ನನಗೆ ಮೂರ್ಛೆ ಹೋಗಿತ್ತು ಎಂದು ನುಡಿಯುತ್ಥಾರೆ. ಘಟನೆಯನ್ನು ಚಾಸಾ-೪ ಮತ್ತು ೫ ರವರು ಬಂದು ಬಿಡಿಸಿದ ವಿಷಯವು ಮೂರ್ಛೆ ಹೋಗಿದ್ದರಿಂದ ನನಗೆ ಗೊತ್ತಾಗಲಿಲ್ಲ ಎಂಧರೆ ಸರಿ. ನಾನು ಪೋಲಿಸರ ಮುಂದೆ ಚಾಸಾ-೪ ಮತ್ತು ೫ ರವರು ಬಂದು ಜಗಳ ಬಿಡಿಸಿದರು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಮು.ಮಾ-೧ನ್ನು ತೋರಿಸಿ ಇದೇ ಕಲ್ಲಿನಿಂದ ಆರೋಪಿ ನಿನಗೆ ಹೊಡೆದನಾ ಎಂದರೆ ಸಾಕ್ಷಿಯು ಅದು ಈ ಕಲ್ಲು ಅಲ್ಲ, ಅದು ಗೋಲಾಕಾರವಿತ್ತು ಇದಕ್ಕಿಂತ ದೊಡ್ಡ ಕಲ್ಲು ಇತ್ತು ಎಂದು ನುಡಿಯುತ್ತಾರೆ.

ನನಗೆ ರಕ್ತಗಾಯವಾಗಿತ್ತು, ಸದರಿ ರಕ್ತ ನನ್ನ ಬಟ್ಟೆ ಮೇಲೆ ಬಿದ್ದಿತ್ತು. ಸದರಿ ನನ್ನ ಬಟ್ಟೆಯನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ನಾನು ಆಸ್ಪತ್ರೆಗೆ ತೋರಿಸಿಕೊಂಡು ಬಂದ ನಂತರ ಬಟ್ಟೆಯನ್ನು ಪೋಲಿಸರಿಗೆ ನೀಡಿರುತ್ತೇನೆ. ನಾನು ಕಲ್ಲು ಮತ್ತು ರಕ್ತ ಹತ್ತಿದ ಬಟ್ಟೆಯನ್ನು ಪೋಲಿಸರಿಗೆ ಪೋಲಿಸ್ ಠಾಣೆಯಲ್ಲಿ ನೀಡಿರುತ್ತೇನೆ. ನನ್ನನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನನಗೆ

ಗೊತ್ತಿಲ್ಲ, ನನಗೆ ಆಗ ಮೂರ್ಛೆ ಹೋಗಿತ್ತು. ನಾನು ಪೋಲಿಸರಿಗೆ ನನಗೆ ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು, ಎಷ್ಟು ಗಂಟೆಗೆ ಕರೆದುಕೊಂಡು ಹೋದರು ಎಂದು ಹೇಳಿಕೆ ನೀಡಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ಆರೋಪಿ ಒಂದು ರಾಜಕೀಯ ಪಕ್ಷದಲ್ಲಿರುತ್ತಾನೆ, ನಾವು ಒಂದು ರಾಜಕೀಯ ಪಕ್ಷದಲ್ಲಿರುತ್ತೇವೆ ಎಂದರೆ ಸರಿ. ಆ ರಾಜಕೀಯ ಪಕ್ಷದಿಂದಲೇ ನಮಗೆ ವೈಮನಸ್ಸು ಬಂದಿರುತ್ತದೆ ಎಂದರೆ ಸರಿ. ಅದಕ್ಕಿಂತ ಮೊದಲು ನಮ್ಮದು ಯಾವುದೇ ವೈಮನಸ್ಸು ಇರಲಿಲ್ಲ ಎಂಧರೆ ಸರಿ. ಪೋಲಿಸರು ನಾನು ಪಿರ್ಯಾದಿ ಕೊಟ್ಟ ಮರುದಿನ ಬಂದು ಭಾವಚಿತ್ರವನ್ನು ತೆಗೆದುಕೊಂಡು ಹೋಗಿರುತ್ತಾರೆ. ಪೊಲಿಸರು ಬಂದಾಗ ಚಾಸಾ-೨ ಮತ್ತು ೩ ರವರು ಇದ್ದರು. ಪೊಲಿಸರು ಭಾವಚಿತ್ರವನ್ನು ಮಾತ್ರ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ ಅಲ್ಲ, ಮಾಹಿತಿಯನ್ನು ತೆಗೆದುಕೊಂಡು ಹೋಗಿರುತ್ತಾರೆ.

ರಾತ್ರಿ10.00 ಗಂಟೆ ಸುಮಾರಿಗೆ ನಾನು ಹನುಮಾನ ದೇವರ ಗುಡಿಯ ಹತ್ತಿರ ಹೋಗುತ್ತಿರುವಾಗ ಆರೋಪಿ ಬಂದು ನನ್ನ ಕಪಾಳಕ್ಕೆ ಹೊಡೆದನು, ನಾನು ಕೆಳಗೆ ಬಿದ್ದೆನು, ಆಗ ಕಲ್ಲು ತೆಗೆದುಕೊಂಡು ನನ್ನ ತಲೆಯ ಮೇಲೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆಗ ನಾನು ಮೂರ್ಛೆ ಹೋಗಿರುತ್ತೇನೆ, ಅಲ್ಲೇ ಇರುವ ಚಾಸಾ-೪ ಮತ್ತು ೫ ರವರು ನನ್ನನ್ನು ಅಂಬುಲೆನ್ಸ ಮೂಲಕ ಕಲಬುರಿಗೆ ಆಸ್ಪತ್ರೆಗೆ ಕಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಕಲಬುರಗಿ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಬಂದ ನಂತರ ನಾನು ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಆರೋಪಿಯ ವಿರುದ್ದ ನಿಂಬರ್ಗಾ ಪೋಲಿಸ್ ಠಾಣೆ ಗುನ್ನಾ ನಂ. **121/2021** ರಲ್ಲಿ ನನ್ನ ಸಹೋದರ ಫಿರ್ಯಾದಿದಾರನಿರುತ್ತಾನೆ, ಸದರಿ ಪ್ರಕರಣದಿಂದ ನಮ್ಮ ಮತ್ತು ಮೆಹಬೂಬ ನಡುವೆ ವೈಮನಸ್ಸು ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ದಿ.**27.04.2023** ರಂದು ಆರೋಪಿ ರಾತ್ರಿ **10.00** ಗಂಟೆ ಸುಮಾರಿಗೆ ಬಂದು ರಾಂಡಕೇ ಪಿಚಲಿ ಬಾರ ತೆರ ಭಾಯಿ ಕರೀಂಕೆ ಊಪರ ಕೇಸ್ ಕರಕೇ ಜೈಲಕೋ ಭೇಜೆ ತುಮಕೊ ಬಹುತ ಮಸ್ತಿ ಆಯಾ ಎಂದು ಅವಾಚ್ಯ ಶಬ್ದಗಳಿಂದ ಬಯ್ಯಲು ಆರಂಭಿಸಿದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆಗ ನಾನು ನನ್ನ ಅಣ್ಣನನ್ನು ಕರೀಂ ಹೊಡೆ ಬಡೆ ಮಾಡಿದ್ದರಿಂದ ಅವನು ಪ್ರಕರಣವನ್ನು ದಾಖಲಿಸಿರುತ್ತಾನೆ ಎಂದು ಕೇಳಿದೆನು, ಮೆಹಬೂಬ ನನ್ನನ್ನು ತಡೆಹಿಡಿದು ನಿಲ್ಲಿಸಿದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-೪ ಮತ್ತು ೫ ರವರು ನಾನು ಚೀರಾಡುವ ಶಬ್ದವನ್ನು ಕೇಳಿ ಬಂದು ಜಗಳ ಬಿಡಿಸಿರುತ್ತಾರೆ, ಈಗ ಚಾಸಾ-೪ ಮತ್ತು ೫ ರವರು ಜಗಳ ಬಿಡಿಸಿರುತ್ತಾರೆ, ಇನ್ನೊಮ್ಮೆ ನನ್ನ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಘಟನೆ ಕುರಿತು ಚಾಸಾ-೪ ಮತ್ತು ೫ ರವರು ನನ್ನ ಸಹೋದರನಿಗೆ ತಿಳಿಸಿರುತ್ತಾರೆ, ಆಗ ರಾತ್ರಿ **10.30** ಗಂಟೆಗೆ ನನ್ನ ಸಹೋದರ ಘಟನಾ ಸ್ಥಳಕ್ಕೆ ಬಂದನು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನನ್ನನ್ನು ಅದೇ ರಾತ್ರಿ ನೇರವಾಗಿ ಕಲಬುರಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ಆಸ್ಪತ್ರೆಗೆ ತೋರಿಸಿಕೊಂಡ ನಂತರ ನಾನು, ನನ್ನ ಸಹೋದರ ನಿಂಬರ್ಗಾ ಪೋಲಿಸ್ ಠಾಣೇಗೆ ಹೋಗಿ ತಡವಾಗಿ ಫಿರ್ಯಾದಿ ಸಲ್ಲಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ. ದಿ.04.05.2023 ರಂದು 4 ರಿಂದ 5 ಗಂಟೆವರೆಗೆ ಪೋಲಿಸರು ನಾನು ತೋರಿಸಿದ ಜಾಗದಲ್ಲಿ ಪಂಚನಾಮೆ ಜರುಗಿಸಿರುತ್ತಾರೆ, ಪೋಲಿಸರು ಸ್ಥಳದಲ್ಲಿ ಭಾವಚಿತ್ರ ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಘಟನೆ ನಡೆದಿರುವುದಿಲ್ಲ, ಹೊಡೆ ಬಡೆ ಮಾಡಿರುವುದಿಲ್ಲ ಎಂಥರೆ ಸರಿ ಅಲ್ಲ. ಆರೋಪಿ ಮತ್ತು ನನ್ನ ನಡುವೆ ರಾಜಕೀಯ ದ್ವೇಷ ಇದ್ದ ಕಾರಣ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿ ನನಗೆ ಜೀವ ಬೆದರಿಕೆ ಹಾಕಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಥರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ